

ಕನ್ನಡ ಲಿಪಿ ಹುಟ್ಟು ಬೆಳವಣಿಗೆ

ಡಾ| ಟಿ. ಎಸ್. ರಾಜಗೋಪಾಲ್

ಕನ್ನಡ ಲಿಪಿ

ಹುಟ್ಟು, ಬೆಳವಣಿಗೆ

ಡಾ. ಟಿ. ಎಸ್. ರಾಜಗೋಪಾಲ್

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು-೫೬೦ ೦೦೨

ಡಾ. ಟಿ. ಎಸ್. ರಾಜಗೋಪಾಲ್ ಅವರಿಂದ ರಚಿಸಲ್ಪಟ್ಟ 'ಕನ್ನಡ ಲಿಪಿ ಹುಟ್ಟು ಬೆಳವಣಿಗೆ' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ (ಜನವರಿ ೧೯೮೩) ಐಬಿಎಚ್ ಪ್ರಕಾಶನದವರ ಕೃಪೆಯಿಂದ ಪ್ರಕಟಿಸಲ್ಪಟ್ಟಿದ್ದು.

KANNADA LIPI HUTTU, BELAVANIGE— a monograph on the Growth and Development of Kannada Calligraphy written by Dr. T. S. Rajagopal. Published by The Directorate of Kannada and Culture, Government of Karnataka, 14/3A Nrupathunga Road, Bangalore-560 002, on the occasion of the *FIRST WORLD KANNADA CONFERENCE (January 1983)* by the Courtesy of IBH Prakashana, Gandhinagar, Bangalore-560 009.

ಬೆಲೆ ರೂ. ೨-೦೦

ಮುಖಪುಟ : ಚಂದ್ರನಾಥ್
ರೇಖಾಚಿತ್ರಗಳು : ಕಮಲೇಶ್

ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ,
ಬೆಂಗಳೂರು-೫೬೦ ೦೦೯

ಮನೆಯಲ್ಲಿ ನಿಮ್ಮ ಹೆಸರನ್ನು ಕೇಳಿದಾಗ, ಕೂಡಲೇ ನೀವು ಓ ಗೊಡುತ್ತೀರಲ್ಲವೇ ? ಅದು ನಿಮ್ಮನ್ನೇ ಉದ್ದೇಶಿಸಿದ್ದುದೆಂದು ನಿಮಗೆ ಹೇಗೆ ತಿಳಿಯಿತು ? ಅದು ನಿಮ್ಮ ಹೆಸರೇ ಹೇಗಾಯಿತು ? ಉತ್ತರಿಸುವುದು ಬಹಳ ಸುಲಭ. ಚಿಕ್ಕ ವಯಸ್ಸಿನಿಂದಲೂ ನಿಮ್ಮನ್ನು ಹಾಗೆಯೇ ಕರೆಯುತ್ತಿದ್ದರಲ್ಲವೇ ? ಅನೇಕ ಬಾರಿ ಆ ರೀತಿ ಉಚ್ಚರಿಸುತ್ತಿದ್ದುದರಿಂದ ಆ ಹೆಸರು "ನನ್ನದೇ" ಎನ್ನುವ ಭಾವನೆ ಬಂದಿತು. ಇದೇ ರೀತಿಯಲ್ಲಿ ಧ್ವನಿಗಳನ್ನು ಗುರುತಿಸಿ ಬರೆಯುವ ಸಂಕೇತಗಳು ಪುನಃ ಪುನಃ ಅದೇ ಕ್ರಮದಲ್ಲಿ ಬಳಸಲ್ಪಟ್ಟು 'ಲಿಪಿ'ಯ ರೂಪವನ್ನು ತಳೆದವು.

ಲಿಪಿ ಎಂದರೇನು ?

ಲಿಪಿ ಎಂದರೇನು ಎನ್ನುವದನ್ನು ತಿಳಿಯೋಣ. ನಾವು ಉದ್ದೇಶಿಸಿದ ವಸ್ತುಗಳನ್ನು ಅಥವಾ ಅಭಿಪ್ರಾಯಗಳನ್ನು ವಿವಿಧ ಧ್ವನಿಗಳ ಮೂಲಕ ಉಚ್ಚರಿಸುತ್ತೇವೆ. ಇವುಗಳನ್ನು ಸೂಚಿಸಲು ಬರೆಯುವ ಚಿಹ್ನೆಗಳನ್ನು 'ಅಕ್ಷರಗಳು' ಎನ್ನುತ್ತೇವೆ. ಈ ಲಿಖಿತ ಚಿಹ್ನೆಗಳನ್ನು ಸಾಮೂಹಿಕವಾಗಿ ಲಿಪಿ ಎನ್ನುತ್ತೇವೆ. ಬರೆಯುವಾಗ ನಾವು ಯಾವ ಧ್ವನಿಗೆ ಯಾವ ಚಿಹ್ನೆಯನ್ನು ಉಪಯೋಗಿಸುತ್ತೇವೆಯೋ, ಓದುವಾಗಲೂ ಸಹ ಅದೇ ಚಿಹ್ನೆಗೆ ಅದೇ ಧ್ವನಿಯನ್ನು ಉಚ್ಚರಿಸಿ ಮೊದಲಿನ ಅಭಿಪ್ರಾಯವನ್ನು ಪಡೆಯುತ್ತೇವೆ. ಈ ರೀತಿಯಲ್ಲಿ ನಾವು ತಿಳಿದುದನ್ನು ಮಾತನಾಡುತ್ತೇವೆ ಮತ್ತು ಮಾತನಾಡುವಾಗಿನ ಧ್ವನಿಗಳನ್ನು


ಬರಹದ ರೂಪಕ್ಕೆ ತರುತ್ತೇವೆ. ಉದಾಹರಣೆಗೆ–ಒಂದು ಬೆಟ್ಟವನ್ನು ಗುರುತಿಸಲು ‘△’ ಎಂದು ಬರೆಯಬಹುದು ; ಕಣ್ಣು ಎಂದು ಸೂಚಿಸಲು ‘◠’ ಎಂದು ಚಿತ್ರಿಸಬಹುದು ಅಥವಾ ‘ಕ’ ಧ್ವನಿಯನ್ನು ಸೂಚಿಸಲು ‘KA’ ಎಂದೂ ಬರೆಯಬಹುದು. ಒಟ್ಟಿನಲ್ಲಿ ನಮ್ಮ ಮನಸ್ಸಿನಲ್ಲಿದ್ದುದನ್ನು ಬರಹದ ರೂಪಕ್ಕೆ ತರಲು ಲಿಪಿ ಸಹಾಯಕವಾಗಿದೆ ಎಂದು ತಿಳಿದಂತಾಯಿತು.

ಮೇಲೆ ಹೇಳಿದ ಗುರುತಿಸುವ ಕ್ರಮವು ದೇಶದಿಂದ

ಚಿತ್ರ-೧




ಲಿಪಿ



ದೇಶಕ್ಕೆ, ಕಾಲದಿಂದ ಕಾಲಕ್ಕೆ ಬದಲಾವಣೆ ಮತ್ತು ಸುಧಾರಣೆ ಗಳನ್ನು ಪಡೆಯಿತು. ಹೇಗೆಂದರೆ ಆಯಾಕಾಲದ ಆಯಾ ದೇಶದ ಜನರು ತಮ ತಮಗೆ ತಿಳಿದಂತೆ, ತಮ ತಮಗೆ ಅನುಕೂಲ ವೆನಿಸಿದಂತೆ ಬೇರೆ ಬೇರೆ ಚಿಹ್ನೆಗಳನ್ನು ಒಂದೇ ಧ್ವನಿಗೆ ಗೊತ್ತು ಪಡಿಸಿದರು. ಹೀಗಾಗಿ ಕನ್ನಡ ಭಾಷೆಯಲ್ಲಿ "ಮಾ", ಹಿಂದಿಯ ಭಾಷೆಯಲ್ಲಿ 'मा' ಮತ್ತು ಇಂಗ್ಲೀಷ್ ಭಾಷೆಯಲ್ಲಿ 'MĀ' ಎನ್ನುವ ಬರಹಗಳು ನೋಡಲು ಬೇರೆ ಇದ್ದಂತೆ ತೋರಿದರೂ 'ಮಾ' ಎಂಬ ಧ್ವನಿಯನ್ನೇ ಸೂಚಿಸಿದವು. ಇದರ ಪರಿಣಾಮ ವೇನಾಯಿತೆಂದರೆ ಅನೇಕ ಲಿಪಿಗಳು ಅಲ್ಲಲ್ಲಿ ಹುಟ್ಟಿಕೊಂಡವು.

ಚಿತ್ರ-೨ 'ರಮಾ' ಉಚ್ಚಾರಣೆಯ ಲಿಖಿತ ಚಿಹ್ನೆಗಳು



ಇವಲ್ಲದೇ ಒಂದೇ ಲಿಪಿಯೇ ಸಾವಿರಾರು ವರ್ಷಗಳು ಬಳಕೆ ಯಲ್ಲಿದ್ದಾಗ ತಲೆಮಾರಿನಿಂದ ತಲೆಮಾರಿಗೆ, ಶತಮಾನದಿಂದ ಶತಮಾನಕ್ಕೆ ಸ್ವಲ್ಪ ಸ್ವಲ್ಪವಾಗಿ ಬದಲಾವಣೆಗಳನ್ನು ಪಡೆ ಯುತ್ತಾ ಬಂದಿತು. ಒಂದೇ ಲಿಪಿಯ ರೂಪಾಂತರಗಳೇ ಬೇರೆ ಬೇರೆ ಲಿಪಿಗಳೇನೋ ಎನ್ನುವಷ್ಟು ಭ್ರಮೆಯೂ ಹುಟ್ಟುವಂತಾ ಯಿತು. ಉದಾಹರಣೆ ಕೊಡುವುದಾದರೆ, ಎರಡು ಸಾವಿರ ವರ್ಷಗಳಿಗಿಂತಲೂ ಹಿಂದಿನದಾದ ಅಶೋಕ ಚಕ್ರವರ್ತಿಯ

ಶಾಸನಗಳಲ್ಲಿ ಬರೆಯಲ್ಪಟ್ಟ '†' ಚಿಹ್ನೆಯು ರೂಪಾಂತರ ಹೊಂದಿ ನಮ್ಮ ಕನ್ನಡ ಲಿಪಿಯು 'ಕ' ಅಕ್ಷರವಾದುದು ನಿಜ ವಾಗಿಯೂ ಆಶ್ಚರ್ಯವನ್ನುಂಟು ಮಾಡುವುದಿಲ್ಲವೇ.

ಲಿಪಿಯ ಬಳಕೆಯಿಂದಾಗುವ ಪ್ರಯೋಜನಗಳು


ಲಿಪಿಯನ್ನು ಬಳಸುವುದರಿಂದ ಆಗುವ ಪ್ರಯೋಜನ ಗಳೇನು ಎಂಬುದನ್ನು ತಿಳಿಯೋಣ. ನಾವು ನೋಡಿದುದು ತಿಳಿ ದುದು, ಮಾತನಾಡಿದುದು, ನಮ್ಮ ಮನಸ್ಸಿನ ವಿಚಾರಗಳು, ಆಕಾಂಕ್ಷೆಗಳು ಇವುಗಳನ್ನೆಲ್ಲಾ ಮತ್ತೊಬ್ಬರಿಗೆ ತಿಳುಹಿಸಲು ಕೈ ಸನ್ನೆ, ಬಾಯಿಸನ್ನೆಗಳು ಮತ್ತು ಧ್ವನಿಸಂಜ್ಞೆಗಳು ಸಾಕು. ಆದರೆ ಅವುಗಳನ್ನು ಶಾಶ್ವತವಾಗಿ ಉಳಿಯುವಂತೆ ಮಾಡಲು, ಹೇಳುವ ವ್ಯಕ್ತಿ ಇಲ್ಲದಿದ್ದರೂ, ಹೆಚ್ಚಿನ ಜನರಿಗೆ ಒಂದೇ ಬಾರಿ ತಿಳಿಯುವಂತೆ ಮಾಡಲು ಲಿಪಿಯ ಬಳಕೆ ಅತ್ಯಗತ್ಯ ಮತ್ತು ಅನಿವಾರ್ಯ. ಇದು ಹೇಗೆಂದು ಕೂಲಂಕಷವಾಗಿ ಪರೀಕ್ಷಿಸೋಣ. ನಮ್ಮ ಕನ್ನಡ ಲಿಪಿಯು ಹುಟ್ಟಿದುದು ಹೇಗೆ, ಬೆಳೆದುದು ಹೇಗೆ, ಎನ್ನುವುದನ್ನು ನಾನು ಮನೆ ಮನೆಗೂ ಹೋಗಿ ತಿಳಿಯಪಡಿಸುವುದಾದರೆ ಬಹಳ ಸಮಯ, ಅವಕಾಶ ಬೇಕಲ್ಲವೇ. ಅದೇ ವಿಚಾರವನ್ನು ನಿಮ್ಮ ಕೈಲಿರುವ ಪುಸ್ತಕ ರೂಪದಲ್ಲಿ ಒದಗಿಸಿದರೆ ಅಂದರೆ ಬರಹದಲ್ಲಿ ಪ್ರಕಟಪಡಿಸಿದರೆ ನೂರಾರು ಸಾವಿರಾರು ಜನ ಒಂದೇ ವೇಳೆಗೆ ಅದನ್ನು ಓದಿ ತಿಳಿದುಕೊಳ್ಳಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಜ್ಞಾನ ಪ್ರಸಾರಣೆಗೆ, ಜ್ಞಾನವು ಶಾಶ್ವತವಾಗಿ ಉಳಿಯುವಂತೆ ಮಾಡಲು ಲಿಪಿಯೇ ಕಾರಣವಾಗಿದೆ. ಇದಲ್ಲದೆ ಮನುಷ್ಯನಿಗೆ ಎಲ್ಲ ವಿಷಯಗಳೂ


ಯಾವಾಗಲೂ ಕರಾರುವಾಕಾಗಿ ನೆನಪಿನಲ್ಲಿಡಲು ಸಾಧ್ಯವಿಲ್ಲ. ಆದುದರಿಂದ ಅವುಗಳನ್ನು ಲಿಖಿತ ರೂಪದಲ್ಲಿ ಸಂಗ್ರಹಿಸುವುದು ಬಹಳ ಅವಶ್ಯಕವಾಗಿದೆ. ಅನೇಕ ಭಾಷೆಗಳನ್ನು ಒಂದೇ ಲಿಪಿಯಲ್ಲಿಯೇ ಬರೆಯಬಹುದು. ಇದು ಭಾವೈಕ್ಯತೆಯನ್ನು ಸಾಧಿಸಲೂ ಬಹಳ ಅನುಕೂಲವಾಗಿದೆ.

ಲಿಪಿಯ ಬಹಳ ಮುಖ್ಯವಾದ ಪ್ರಯೋಜನವೆಂದರೆ ಅದು ಅತ್ಯಂತ ಪ್ರಾಮಾಣಿಕವಾದ ಐತಿಹಾಸಿಕ ಸಾಕ್ಷಿಯಾಗಿದೆ. ನಡೆದ ಘಟನೆಗಳನ್ನು ಬಹಳ ಪ್ರಾಮಾಣಿಕವಾಗಿ ಸಂರಕ್ಷಿಸಿಡುತ್ತದೆ. ನಿಮಗೆಲ್ಲ ತಿಳಿದಿರುವಂತೆ ಚಕ್ರವರ್ತಿ ಅಶೋಕನು ಸಾಮ್ರಾಜ್ಯವಾಳಿ ಎರಡುವರೆ ಸಾವಿರ ವರ್ಷಗಳು ಉರುಳಿ ಹೋದವು. ಅವನ ಕಾಲದಲ್ಲಿ ಏನಾಯಿತೆಂದು ತಿಳಿಸಲು ಅವನು ಈಗ ನಿಮ್ಮೆದುರಿಗೆ ಬಂದು ಹೇಳಲು ಸಾಧ್ಯವೇ ? ನಮ್ಮ ಭಾರತವು ಪ್ರಾಚೀನ ಕಾಲದಲ್ಲಿ ಹೇಗಿತ್ತೆಂಬುದನ್ನು ತಿಳಿದುಕೊಳ್ಳಲು ಕಾತುರರಾದ ನಮಗೆ ಇಂತಹ ಘಟನೆಗಳು ನಡೆದುವೆಂದು ಪ್ರಾಮಾಣಿಕವಾಗಿ ಹೇಳುವ ಸಾಕ್ಷಿಗಳು ಯಾರು ? ಆಗಿನ ಕಾಲದ ಲಿಪಿಬದ್ಧ ಶಾಸನಗಳೇ ಇತಿಹಾಸಕಾರರಿಗೆ ಘಟನೆಗಳನ್ನು ಬಣ್ಣಿಸುವ ಸಾಕ್ಷಿಗಳಾಗಿವೆ.


ಲಿಪಿಯ ಅತ್ಯಂತ ಮಹತ್ವದ ಉಪಯೋಗವೆಂದರೆ ಅದು ನಮ್ಮ ಸಭ್ಯತೆಯ ಬೆಳವಣಿಗೆಗೆ, ಜ್ಞಾನದ ಅಭಿವೃದ್ಧಿಗೆ, ವಿಜ್ಞಾನದ ಪ್ರಗತಿಗೆ, ಕಲೆಯ ಉನ್ನತಿಗೆ, ಸಂಸ್ಕೃತಿಯ ಪರಿಷ್ಕರಣೆಗೆ ಮತ್ತು ಇತಿಹಾಸದ ನಿಖರತೆಗೆ ಅತ್ಯಂತ ಸಹಾಯಕವಾಗಿದೆ. ಲಿಪಿಯ ಬಳಕೆ ಇಲ್ಲದಿದ್ದರೆ, ಇಂದಿಗೂ ಮನುಷ್ಯ ಕೇವಲ ಕೈಸನ್ನೆ, ಬಾಯಿಸನ್ನೆಗಳಿಂದ ಜೀವನ ಮಾಡುತ್ತಾ ಕಾಡುಪ್ರಾಣಿಗಳ ಮಟ್ಟದಲ್ಲಿಯೇ ಇರುತ್ತಿದ್ದನು.


ಚಿತ್ರ-೩ ಲಿಪಿ—ಅತ್ಯಂತ ಪ್ರಾಮಾಣಿಕವಾದ ಸಾಕ್ಷಿ



ಬಂಡೆಗಲ್ಲುಗಳ ಮೇಲಿನ ಬರಹ


ಸ್ತಂಭಗಳ ಮೇಲಿನ ಬರಹ


ಶಾಸನ ಕಲ್ಲುಗಳು


ತಾಮ್ರ ಪತ್ರಗಳು


ಓಲೆಗರಿಗಳು


ನಾಣ್ಯಗಳು

ಒಂದೇ ಮಾತಿನಲ್ಲಿ ಹೇಳುವುದಾದರೆ ಮನುಷ್ಯನ ಜೀವನದ ಸರ್ವತೋಮುಖ ಅಭಿವೃದ್ಧಿಗೆ ಲಿಪಿಯೇ ಕಾರಣವಾಗಿದೆ.

ಲಿಪಿ ಮತ್ತು ಭಾಷೆ

ಲಿಪಿಗೂ ಭಾಷೆಗೂ ಇರುವ ವ್ಯತ್ಯಾಸವೇನೆಂಬುದನ್ನು ತಿಳಿಯೋಣ. ಲಿಪಿ ಎಂದರೆ ಈ ಮೊದಲೇ ಹೇಳಿರುವಂತೆ ಕಣ್ಣಿಗೆ ತೋರಿಬರುವ ಬರಹದ ಚಿಹ್ನೆಗಳು. ಭಾಷೆ ಎಂದರೆ ನಾವಾಡುವ ಮಾತುಗಳು, ಅರ್ಥ ಒದಗಿಬರುವ ಶಬ್ದಗಳು. ನೋಟ ಲಿಪಿಯ ಜೀವಾಳ, ಧ್ವನಿ ಭಾಷೆಯ ಜೀವಾಳ. ಲಿಪಿ ಮತ್ತು ಭಾಷೆ, ಇವೆರಡೂ ನಮ್ಮ ಮನಸ್ಸಿನ ವಿಚಾರಗಳನ್ನು ಹೊರಗೆಡಹುವ ಉಪಕರಣಗಳಾದರೂ, ಲಿಪಿಯು ಲಿಖಿತ ರೂಪದಲ್ಲಿದೆ. ಭಾಷೆಯು ವಾಕ್ ರೂಪದಲ್ಲಿದೆ. ಭಾಷೆ ಮತ್ತು ಲಿಪಿಗಳು ಮನುಷ್ಯ ಮತ್ತು ಅವನ ಉಡಿಗೆಗಳು ಇದ್ದ ಹಾಗೆ. ಒಬ್ಬನೇ ಮನುಷ್ಯ ಅನೇಕ ಉಡಿಗೆಗಳನ್ನು ಒಂದರ ಬದಲಿಗೆ ಒಂದು ತೊಡುವ ಹಾಗೆ, ಒಂದೇ ಭಾಷೆ



ಚಿತ್ರ-೪

೧ ಕನ್ನಡ ಭಾಷೆ : ನನ್ನ ಹೆಸರು ಅರ್ಚನಾ (ಕನ್ನಡ ಲಿಪಿ)

೨ ಕನ್ನಡ ಭಾಷೆ: नन्न हेसरु अर्चना (ಹಿಂದಿ ಲಿಪಿ)

೩ ಕನ್ನಡ ಭಾಷೆ: NANNA HÉSARU ARCHANĀ (ಇಂಗ್ಲಿಷ್ ಲಿಪಿ)

(ಒಂದೇ ಭಾಷೆ ಕನ್ನಡದಲ್ಲಿರುವ ವಾಕ್ಯವನ್ನೇ ಬೇರೆ ಬೇರೆ ಲಿಪಿಗಳಲ್ಲಿ ಬರೆಯಲಾಗಿದೆ)

ಯನ್ನು ಅನೇಕ ಲಿಪಿಗಳಲ್ಲಿ ತಿಳಿಯಪಡಿಸಬಹುದು. ಹಿಂದಿನ ಕಾಲದಲ್ಲಿ ಅಶೋಕ ಚಕ್ರವರ್ತಿಯು ಬರೆಸಿದ ಶಾಸನಗಳಲ್ಲಿ ಬರಹಗಳು ಒಂದೇ ಭಾಷೆಯಲ್ಲಿ ಅಂದರೆ ಪಾಲಿ ಭಾಷೆಯಲ್ಲಿದ್ದರೂ, ಬೇರೆ ಬೇರೆ ಲಿಪಿಗಳಲ್ಲಿ–ಬ್ರಾಹ್ಮೀ ಮತ್ತು ಖರೋಷ್ಠಿ ಲಿಪಿಗಳಲ್ಲಿ–ಮೈದೋರಿವೆ. ಇಂದಿಗೂ ಸಹಿತ ಜನಾನುಕೂಲತೆಗಾಗಿ ಒಂದೇ ಭಾಷೆಯಲ್ಲಿರುವ ವಿಚಾರ ಸಾಮಗ್ರಿಯು ಅನೇಕ ಲಿಪಿಗಳಲ್ಲಿ ಬರೆಯಲ್ಪಡುತ್ತಿದೆ. ಉದಾಹರಣೆಗಾಗಿ—

MANORAMA ENTERPRISES

ಮನೋರಮ ಎಂಟರ್‌ಪ್ರೈಸಸ್

मनोरमा ऍँटरप्रैसस

ಈ ರೀತಿ ಒಂದು ಅಂಗಡಿಯ ನಾಮಫಲಕವಿತ್ತೆಂದು ಇಟ್ಟುಕೊಳ್ಳಿ. ವಿಚಾರ ಸಾಮಗ್ರಿ ಇಂಗ್ಲೀಷು ಭಾಷೆಯಲ್ಲಿ ಇದ್ದುದರಿಂದ ಮೊದಲಿನ ಪಂಕ್ತಿಯಲ್ಲಿ ಇಂಗ್ಲೀಷು ಲಿಪಿಯಲ್ಲಿಯೂ, ಎರಡನೆಯ ಪಂಕ್ತಿಯಲ್ಲಿ ಜನಪ್ರಿಯತೆಯ ಕಾರಣದಿಂದಾಗಿ ಮಾತೃಭಾಷೆ ಕನ್ನಡದ ಲಿಪಿಯಲ್ಲಿಯೂ, ಮೂರನೆಯ ಪಂಕ್ತಿಯಲ್ಲಿ ರಾಷ್ಟ್ರೀಯ ಕರ್ತವ್ಯವೆಂದು ಹಿಂದೀ ಲಿಪಿಯಲ್ಲಿಯೂ ಬರೆಯಲ್ಪಟ್ಟಿತು. ಇಂತಹ ಪ್ರದರ್ಶನಗಳು ಇಂದಿನ ದಿನಗಳಲ್ಲಿ ಎಲ್ಲರ ಅನುಭವಕ್ಕೂ ತಿಳಿದ ವಿಚಾರವಾಗಿದೆ.

ಲಿಪಿಯ ಹುಟ್ಟು

ಈಗ ಲಿಪಿಯ ಆರಂಭ ಹೇಗಾಯಿತೆಂಬುದರ ಕಡೆಗೆ ಗಮನ ಕೊಡೋಣ. ಈಗಾಗಲೇ ನಮಗೆಲ್ಲರಿಗೂ ತಿಳಿದಿರುವಂತೆ ನಮ್ಮ ಭಾರತ ದೇಶವು ಅತ್ಯಂತ ಪ್ರಾಚೀನ ಸಭ್ಯತೆಯನ್ನು ಹೊಂದಿರುವ ಸಾಧ್ಯತೆ ಪಡೆದಿರುತ್ತದೆ. ಇಂದಿಗೂ ನಮ್ಮ ದೇಶವೂ ತನ್ನ ಪ್ರಾಚೀತ ಸಭ್ಯತೆಯ ವೈಭವದ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ. ಆ ಕುರುಹುಗಳೇನೆಂದು ಈಗ ಪರಿಶೀಲಿಸೋಣ.

ನೀವು ಈಗ ಅನೇಕ ಸಹಸ್ರಾರು ವರ್ಷಗಳ ಹಿಂದೆ ಇದ್ದಿರೆಂದು ಭಾವಿಸಿಕೊಳ್ಳಿ. ಆಗಿನ ಪರಿಸ್ಥಿತಿಗಳನ್ನು ಗಮನಿಸಿ. ಮಾತಿಗೆ ಬದಲಾಗಿ, ಮಾತಿಗೆ ಜೊತೆಯಾಗಿ ಮನಸ್ಸಿನ ವಿಚಾರಗಳನ್ನು ಹೊರ ಮೂಡಿಸಲು ಮಾಧ್ಯಮ ಒಂದು ಬಹಳ ಅಗತ್ಯವಾಗಿತ್ತು. ವಿಚಾರ ನೆನಪಿಡಲೋ ಅಥವಾ ಗುರುತಿಸಲೋ ಗೀರುಗಳು ಸಹಾಯಕವಾದವು. ಇಂದಿಗೂ ಹಳ್ಳಿಗರು ಹಾಲು ಮೊಸರಿನ ಲೆಕ್ಕ ಇಡಲು ಗೋಡೆಯ ಮೇಲೆ ಗೀರುಗಳನ್ನೆಳೆಯುವುದು ಈ ಪ್ರಾಚೀನ ಪದ್ಧತಿಯನ್ನು ನೆನಪಿಗೆ ತರುತ್ತದೆ. ಮೊದ ಮೊದಲು ಅರ್ಥರಹಿತವಾಗಿ ಎಳೆದ ಈ ಗೀರುಗಳು ಕ್ರಮೇಣ ಚಿತ್ರಗಳ ರೂಪವನ್ನು ತಳೆಯುತ್ತಾ ಬಂದವು. ಚಿತ್ರ ಸಂಕೇತಗಳು ಮನುಷ್ಯನ ಮನಸ್ಸಿನ ವಿಚಾರಗಳನ್ನು ಮೈದೋರುವಂತೆ ಮಾಡಿದವು. ಮನುಷ್ಯನನ್ನು ಪ್ರಾಣಿಗಳ ಮಟ್ಟದಿಂದ ಮೇಲಕ್ಕೇರಿಸಿದವು. “ತಿಳಿದುದನ್ನು” ಬರೆಹ ರೂಪದಲ್ಲಿಟ್ಟು, ಅದನ್ನು ಕಂಡಾಗ ಮತ್ತೆ ಅದೇ “ತಿಳಿದುದನ್ನು” ತಿಳಿಯುವ ಈ ಅಮೂಲ್ಯ ರಹಸ್ಯವನ್ನು ಅರಿತಾಗ ಮನುಷ್ಯನಿಗೆ ಆದೆಂತಹ


ರೋಮಾಂಚನಕಾರಿಯಾದ ಅನುಭವವಾಗಿರಬೇಕು! ಅವನು ಅಷ್ಟಕ್ಕೇ ತೃಪ್ತಿಪಡಲಿಲ್ಲ. ತನ್ನ ಭಾಷೆಯನ್ನು ಚಿತ್ರರೂಪಕ್ಕೆ ಇಳಿಸುವ ಸಾಹಸ ಮಾಡಿದ. ಅದೇ ಕ್ರಮೇಣ ಚಿತ್ರ ಲಿಪಿ ಆಯಿತು. ಈ ರೀತಿಯಲ್ಲಿ ಮನುಷ್ಯನ ಮನಸ್ಸಿನ 'ಬೇಕು-ಬೇಡ'ಗಳು ಒರಟು ಗೀಟುಗಳಿಂದ ಆರಂಭವಾಗಿ ಚಿತ್ರ ಲಿಪಿಯ ಹಂತವನ್ನು ಮುಟ್ಟಿತು. ಬೇಕಾದ ವಸ್ತುವನ್ನು ಅದರಂತೆಯೇ ಬರೆದು ತೋರಿಸುವುದು ಅವನ ಪ್ರಗತಿಯ ಮೊದಲನೆಯ ಹೆಜ್ಜೆಯಾಯಿತು. ಇಂದಿಗೂ ಆ ಕ್ರಮವು ಬಳಕೆಯಲ್ಲಿದೆ. ರೈಲು ಬಂಡಿಗಳ ಮೇಲೆ ಹೆಂಗಸರಿಗೆ ಮೀಸಲಿರಿಸಲಾದ ಬಂಡಿಗಳನ್ನು ಗುರುತಿಸಲು ಹೆಂಗಸರ ಮುಖದ ಚಿತ್ರವನ್ನು ಬಿಡಿಸಿರುತ್ತಾರೆ. ಅದನ್ನು ನೋಡುವವರು ಈ "ನೋಡಿ ತಿಳಿಯುವ" ಬರಹ ಯಾರಿಗಾದರೂ ಸುಲಭದಲ್ಲಿ ಅರ್ಥವಾಗುವುದು. ಈಗಿನ ಲಿಪಿಗಳಲ್ಲಿ ಚೀನ ದೇಶದವರ ಲಿಪಿಯು ಚಿತ್ರ ಲಿಪಿಗೆ ಅತ್ಯಂತ ಸಮೀಪವಾಗಿದೆ. ಈಗಿನ ಕಾಲದ ಜಾಹೀರಾತುಗಳೂ ಸಹ ಮೂರುಪಾಲು ಚಿತ್ರಲಿಪಿಯ ಆಧಾರವನ್ನು ಪಡೆದಿರುತ್ತವೆ. ಅಂತೆಯೇ ಅವುಗಳನ್ನು ತಿಳಿಯುವುದು ಸುಲಭ. ಕಾರಣ ಸ್ಪಷ್ಟವಾಗಿಯೇ ಇದೆ. ಇಲ್ಲಿ ಯಾವುದೇ ನಿರ್ದಿಷ್ಟ ಭಾಷೆಯನ್ನು ತಿಳಿದುಕೊಂಡು ಇರಬೇಕೆಂಬ ಅವಶ್ಯಕತೆ ಇಲ್ಲ.

ಭಾರತದ ಪ್ರಾಚೀನ ಲಿಪಿಗಳು

ನಮ್ಮ ಭಾರತದ ಪ್ರಾಚೀನ ಬರಹಗಳಲ್ಲಿ ಮೂರು ಬಗೆಯ ಲಿಪಿಗಳು ಬಳಕೆಯಲ್ಲಿದ್ದವು. ಅವು ಯಾವುವೆಂದರೆ—

(೧) ಸಿಂಧೂ ಲಿಪಿ
(೨) ಬ್ರಾಹ್ಮೀ ಲಿಪಿ
(೩) ಖರೋಷ್ಠಿ ಲಿಪಿ


ಚಿತ್ರ-೫ ಸಿಂಧೂಲಿಪಿಯ ಪ್ರಮುಖ ಚಿಹ್ನೆಗಳು



[ಮೇಲಿನ ಲಿಪಿ ಹಾಗೂ ಅದಕ್ಕೆ ಸಂಬಂಧಿಸಿದ ಭಾಷೆ ಇನ್ನೂ ರಹಸ್ಯವಾಗಿಯೇ ಉಳಿದಿವೆ]

ಸಿಂಧೂ ಲಿಪಿ : ಇದು ಸುಮಾರು ೫೦೦೦ ವರ್ಷಗಳಿಗಿಂತಲೂ ಹಿಂದಿನ ಲಿಪಿಯಾಗಿದೆ. ಇದರಲ್ಲಿ ಅಕ್ಷರಗಳಂತೆ ಕಂಡುಬರುವ ಚಿತ್ರಗಳು ಉಪಯೋಗಿಸಲ್ಪಟ್ಟಿವೆ. ಮನುಷ್ಯರು, ಪಾತ್ರೆಗಳು, ಗಿಡಗಳು, ಮೀನುಗಳು ಮತ್ತು ಪರ್ವತಗಳು ಮುಂತಾದುವನ್ನು ಹೋಲುವ ಆಕೃತಿಗಳು ಒಂದರ ಪಕ್ಕದಲ್ಲೊಂದು ಬರೆಯಲ್ಪಟ್ಟು ಅಕ್ಷರಗಳಂತೆ ತೋರುತ್ತವೆ. ಇದು ಚಿತ್ರ ಲಿಪಿಯಾಗಿರಬಹುದು ಅಥವಾ ಧ್ವನಿಲಿಪಿಯೂ ಆಗಿರಬಹುದು. ಅಥವಾ ಎರಡೂ ಲಿಪಿಗಳ ಸಂಯೋಗವಿರಬಹುದು. ಆಗಿನ ಕಾಲದ ಭಾಷೆ ಮತ್ತು ಲಿಪಿ ಇವೆರಡರ ಪರಿಚಯವು ಇಲ್ಲದಿರುವುದರಿಂದ ಈ ಲಿಪಿಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಾಗಲಿಲ್ಲ. ಅನೇಕ ಸ್ತುತ್ಯ ಪ್ರಯತ್ನಗಳು ನಡೆದರೂ, ಈ ಲಿಪಿಯು ಲಿಪಿ ಶಾಸ್ತ್ರಕಾರರಿಗೆ ಇನ್ನೂ ಒಗಟಾಗಿಯೇ ಉಳಿದಿದೆ.

ಬ್ರಾಹ್ಮೀ ಲಿಪಿ : ಬ್ರಾಹ್ಮೀ ಲಿಪಿಯು ಸುಮಾರು ೨೫೦೦ ವರ್ಷಗಳ ಹಿಂದೆಯೇ ಬಳಕೆಯಲ್ಲಿದ್ದ ಲಿಪಿಯಾಗಿದೆ. ಪ್ರಾಚೀನ ಭಾರತದ ಅತ್ಯಂತ ಮುಖ್ಯವಾದ ದೇಶ ಕಾಲಗಳಿಗನುಗುಣವಾಗಿ ರೂಪಾಂತರ ಹೊಂದುತ್ತಾ ಬಂದಿದೆ. ಇಂದಿನ ಉತ್ತರ ಭಾರತದ ಲಿಪಿಗಳೂ, ದಕ್ಷಿಣ ಭಾರತದ ಲಿಪಿಗಳೂ ತಮ್ಮ ಮೂಲವನ್ನು ಈ ಬ್ರಾಹ್ಮೀಲಿಪಿಯಲ್ಲಿಯೇ ಹೊಂದಿವೆ. ಈ ಬ್ರಾಹ್ಮೀಲಿಪಿಯು ಉಚ್ಚಾರಣೆಯ ಧ್ವನಿಗೆ ಅನುಸಾರವಾಗಿ ಬರೆಯಲ್ಪಟ್ಟುದರಿಂದ ಆಗಿನ ಕಾಲದಿಂದಲೂ ಅದು ವೈಜ್ಞಾನಿಕ ರೀತಿಯಲ್ಲಿ ಬರೆದ ಸಾರ್ವಜನಿಕ ಲಿಪಿಯಾಗಿದೆ. ಇಂದಿಗೂ ಅದರ ಉಪಯೋಗವನ್ನು ನಾವೆಲ್ಲರೂ ಪಡೆಯುತ್ತಿದ್ದೇವೆ. "ನುಡಿದಂತೆ ಬರೆಯುವ" ವಿಧಾನವನ್ನು ಅನುಸರಿಸುವ



ಈ ಲಿಪಿಯು ಎಲ್ಲ ಬಗೆಯ ಬೇರೆ ಲಿಪಿಗಳಿಗಿಂತಲೂ ಪ್ರಸಿದ್ಧಿ ಹೊಂದಿ ಜನಪ್ರಿಯತೆ ಗಳಿಸಿದೆ. ಈ ಲಿಪಿಯಲ್ಲಿ ಅಕ್ಷರಗಳು, ನಾವು ಈಗಿನ ಕನ್ನಡ ಲಿಪಿ ಬರೆಯುವಂತೆ, ಎಡದಿಂದ ಬಲಕ್ಕೆ, ಅನಂತರ ಸಾಲುಗಳ ಕೆಳಗೆ ಸಾಲುಗಳಾಗಿ ಬರೆಯಲ್ಪಟ್ಟಿದೆ. "ಗಿಡದ ರೆಂಬೆಗೆ ತೂಗಿಬಿದ್ದ ಹಣ್ಣುಗಳಂತೆ ಕಾಣುವ" ಈ ಬರಹದ ಧೋರಣೆಯು ಬ್ರಾಹ್ಮೀ ಲಿಪಿಯ ಸೌಂದರ್ಯವನ್ನೂ


ಹೆಚ್ಚಿಸಿತು. ಅದರಲ್ಲಿ ವಿಶೇಷ ಆಸಕ್ತಿ ಗೌರವಗಳನ್ನೂ ಮೂಡಿಸಿತು. ಅದನ್ನು ದೈವ ಸೃಷ್ಟವಾದುದೆಂದು ಪೂಜಿಸುವವರೆಗೂ ಜನರ ಆದರವು ಹೆಚ್ಚಿತು. ನಮಗೆ ಈ ಲಿಪಿಯ ಬರಹಗಳು ಸಿಗುವ ಸ್ಥಳಗಳಾವುವೆಂದರೆ–ಮಸ್ಕಿ, ಪಾಲ್ಕಿಗುಂಡು, ಸಿದ್ದಾಪುರ, ಜಟಿಂಗ ರಾಮೇಶ್ವರ, ಎರ್ರಗುಡಿ, ಸೋಪಾರಾ, ಗಿರಿನಾರ, ತೋಪ್ರ, ತಕ್ಷಶಿಲಾ, ಮನ್‌ಸೆಹ್ರಾ ಇತ್ಯಾದಿ ಸ್ಥಳಗಳು.

ಪ್ರಾಚೀನ ಭಾರತದ ಹೆಮ್ಮೆಯ ಚಕ್ರವರ್ತಿ ಅಶೋಕನು ಜನತೆಗೆ ತನ್ನ ಸಂದೇಶಗಳನ್ನು ಬಂಡೆಗಳ ಮೇಲೆ ಕೆತ್ತಿಸಿ ತಿಳಿದು ಪಡಿಸುತ್ತಿದ್ದುದು ಈ ಬ್ರಾಹ್ಮೀ ಲಿಪಿಯಲ್ಲಿಯೇ. ಈ ಬರಹಗಳಲ್ಲಿ ರಾಜ್ಯ ಶಾಸನ ಕಾರ್ಯಭಾರಗಳೊಂದಿಗೆ ಬುದ್ಧನ ಅಮೂಲ್ಯ ಸಂದೇಶವಾದ ಕರುಣೆ ಮತ್ತು ದಯೆಯ ಮಹತ್ವದ ಛಾಯೆಯೂ ಹಾಗೂ ಹಿತೋಪದೇಶವೂ ಕಂಡುಬರುತ್ತದೆ. ಪಾಲಿ ಭಾಷೆಯಲ್ಲಿರುವ ಈ ಆದೇಶಗಳು ಬ್ರಾಹ್ಮೀ ಲಿಪಿಯಲ್ಲಿ ಕೊರೆಯಲ್ಪಟ್ಟಿರುತ್ತವೆ.

ಖರೋಷ್ಠಿ ಲಿಪಿ : ಖರೋಷ್ಠಿ ಲಿಪಿಯು, ಈಗಿನ ಕಾಲದ ಉರ್ದು ಲಿಪಿಯಂತೆ, ಬಲದಿಂದ ಎಡಕ್ಕೆ ಬರೆಯಲ್ಪಡುತ್ತಿದ್ದು, ಸಾಲುಗಳು ಒಂದರ ಕೆಳಗೊಂದರಂತೆ ಜೋಡಿಸಲ್ಪಡುತ್ತಿದ್ದುದಾಗಿ ತಿಳಿದು ಬಂದಿದೆ. ಈ ಲಿಪಿಯ ಅಕ್ಷರಗಳು ಕತ್ತೆಯ ತುಟಿಗಳಂತೆ ದಪ್ಪಗಿದ್ದುದರಿಂದಲೋ, ಕತ್ತೆಯ ಮೇಲೆ ಸಾಗಿಸುವ ಹೇರುಗಳ ಚರ್ಮದ ಮೇಲೆ ಹೆಚ್ಚು ಬರೆಯಲ್ಪಡುತ್ತಿದ್ದರಿಂದಲೋ ಅಥವಾ ಇನ್ಯಾವ ಕಾರಣದಿಂದಲೋ ಈ ಲಿಪಿ ಖರೋಷ್ಠಿ ಎಂಬ ಹೆಸರನ್ನು ಪಡೆಯಿತು. ಪರ್ಷಿಯಾ, ಅರೇಬಿಯಾ ಮುಂತಾದ ಪ್ರದೇಶ

ಚಿತ್ರ. - ಅಶೋಕನ ಶಾಬಾಸ್‌ಗಾರಿಯ ಶಾಸನ [ಖರೋಷ್ಠಿ ಲಿಪಿ]

[ಬಲದಿಂದ ಎಡಕ್ಕೆ ಬರೆದು ಓದಬೇಕು]



[ಮೂಲ ಲೇಖವು ೫ ಪಂಕ್ತಿಗಳಲ್ಲಿ ಬರೆಯಲ್ಪಟ್ಟಿದೆ]

ಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದ ಈ ಲಿಪಿಯು ಭಾರತದ ಉತ್ತರ ಮೂಲೆಯಲ್ಲಿ ಸ್ಥಾನವನ್ನು ಪಡೆದಿದ್ದಿತು ಎಂದು ಈಗ ದೊರೆತಿರುವ ಶಾಸನಗಳಿಂದ ತಿಳಿಯಬಹುದಾಗಿದೆ. ಚಕ್ರವರ್ತಿ ಅಶೋಕನ ಶಾಸನಗಳು ಖರೋಷ್ಠಿ ಲಿಪಿಯಲ್ಲಿಯೂ ಸಹ ಬರೆಯಲ್ಪಟ್ಟಿರುತ್ತದೆ.

ಕನ್ನಡ ಲಿಪಿಯ ಬೆಳವಣಿಗೆ

ಬ್ರಾಹ್ಮೀ ಲಿಪಿಯು ಭಾರತದ ಎಲ್ಲ ಆಧುನಿಕ ಲಿಪಿಗಳಿಗೂ ಮೂಲವೆಂದು ಆಗಲೇ ತಿಳಿಯಪಡಿಸಿದೆ. ಈಗ ಈ ಲಿಪಿಯು ಪರಿಚಯವನ್ನು ಪಡೆದು ಈಗಿನ ಕನ್ನಡ ಲಿಪಿಗೆ ಅಕ್ಷರಗಳು ಹೇಗೆ ರೂಪಾಂತರವನ್ನು ಹೊಂದಿತೆಂಬುದನ್ನು ತಿಳಿಯೋಣ.

ಮೊದಲನೆಯ ಹಂತ : ಚಿತ್ರ ೮ನ್ನು ನೋಡಿರಿ. ಅದರಲ್ಲಿ ಕ್ರಿ. ಪೂ. ೩ ನೆಯ ಶತಮಾನದ್ದೆಂದು ತೋರಿಸಿರುವ ಮೊದಲನೆಯ ಉದ್ದ ಸಾಲುಗಳಲ್ಲಿರುವ ಅಕ್ಷರಗಳು ಬ್ರಾಹ್ಮೀ ಲಿಪಿಯಲ್ಲಿವೆ. ನಿಧಾನವಾಗಿ, ಗಮನಕೊಟ್ಟು ಒಂದೊಂದೇ ಅಕ್ಷರ ಬರೆದುಕೊಳ್ಳಿ. ಮೊದಲು ಸ್ವರಗಳನ್ನು ತಿಳಿದುಕೊಳ್ಳಿ, ಅ, ಆ...ಇತ್ಯಾದಿ. ಇವುಗಳನ್ನು ಬರೆದು ಅಭ್ಯಾಸ ಮಾಡಿಕೊಂಡು ವ್ಯಂಜನಗಳನ್ನು ಎಂದರೆ 'ಕ' ಮುಂತಾದ ಅಕ್ಷರಗಳನ್ನೂ ತಿದ್ದಿ ಅಭ್ಯಾಸ ಮಾಡಿಕೊಳ್ಳಿರಿ. ನಂತರ ಕಾಗುಣಿತ ಅಭ್ಯಾಸ ಮಾಡಿರಿ. ಪ್ರತಿಯೊಂದು ಅಕ್ಷರವನ್ನು ಕನಿಷ್ಠ ೨೫ ಬಾರಿಯಾದರೂ ನೆನಪಿನಿಂದಲೇ ಬರೆದು ಅದನ್ನು ಯಾವ ಅಕ್ಷರವೆಂದು ಸರಿಯಾಗಿ ಗುರುತಿಸುವವರೆಗೂ ಅಭ್ಯಾಸಕ್ರಮ ಮುಂದುವರಿಸಿರಿ.

ಎರಡನೆಯ ಹಂತ : ಬ್ರಾಹ್ಮೀ ಲಿಪಿಯ ಚಿಹ್ನೆಗಳು ೩–೪ ಶತಮಾನಗಳ ಅವಧಿಯಲ್ಲಿ ತಮ್ಮ ಸ್ವರೂಪವನ್ನು ಸ್ವಲ್ಪ ಸ್ವಲ್ಪವಾಗಿ ಬದಲಿಸುತ್ತಾ ಬಂದವು. ಚಿತ್ರ ೮ ರಲ್ಲಿ ಎರಡನೆಯ ಉದ್ದ ಸಾಲನ್ನು ಗಮನಿಸಿ ಮತ್ತು ಅದರ ಎಡ ಪಕ್ಕದಲ್ಲಿರುವ ಬ್ರಾಹ್ಮೀ ಲಿಪಿಯ ಚಿಹ್ನೆಗಳೊಂದಿಗೆ ಹೋಲಿಕೆ ಮಾಡಿನೋಡಿರಿ. ಹೀಗೆ ಬದಲಾವಣೆ ಹೊಂದಿದ ಚಿಹ್ನೆಗಳನ್ನು ಪುನಃ ಪುನಃ ಬರೆದು ಗುರುತಿಸಿರಿ.

ಉಳಿದ ಹಂತಗಳು ; ಮೇಲೆ ಹೇಳಿದ ಕ್ರಮದಲ್ಲಿ ೩,೪, ೫,೬, ಮತ್ತು ೭ ನೆಯ ಉದ್ದ ಸಾಲುಗಳನ್ನು ಪರಿಚಯ ಮಾಡಿಕೊಳ್ಳಿರಿ. ಅನಂತರ ಒಂದೊಂದೇ ಅಕ್ಷರವನ್ನು (ಚಿತ್ರ–೮ರ ಅಡ್ಡ ಸಾಲುಗಳಲ್ಲಿ ತೋರಿಸಿದಂತೆ) ಬರೆದು ಅವರ ರೂಪಾಂತರಗಳನ್ನು, ಶತಮಾನಗಳ ಹಂತದಲ್ಲಿ ಗುರುತಿ


ಸುತ್ತಾ ಬನ್ನಿರಿ. ಈ ರೀತಿ ಎಲ್ಲ ಅಕ್ಷರಗಳ ಎಲ್ಲ ಹಂತಗಳೂ ಮನದಟ್ಟಾಗುವವರೆಗೂ ಬರೆದು ಅಭ್ಯಸಿಸಬೇಕು.

ಮೇಲಿನ ಕ್ರಮದಲ್ಲಿ ಕಲಿತನಂತರ ನಿಮಗೆ ಈ ಕೆಳಗಿನ ವಿಚಾರಗಳು ನೆನಪುಳಿಯುವುವು.

೧. ಬ್ರಾಹ್ಮೀ ಲಿಪಿಯ ಅಕ್ಷರಗಳು ಮೊದಲು ರೆಂಬೆಯಿಂದ ತೂಗು ಬಿದ್ದ ಹಣ್ಣುಗಳಂತೆ 'ಉದ್ದ ಕಾವು – ಅಡ್ಡ ನಡುವು, ಹೊಂದಿದ್ದು' ಅನಂತರ ತಮ್ಮ ಎಡ ಅಥವಾ ಬಲಗಳಲ್ಲಿ ಬಗ್ಗ ತೊಡಗಿದವು. ಆಮೇಲೆ ಅಕ್ಷರಗಳು ಅಗಲದಲ್ಲಿ ಹಿಗ್ಗುತ್ತಾ, ಉದ್ದದಲ್ಲಿ ಕುಗ್ಗುತ್ತಾ ದುಂಡಗೆ ಆಗುತ್ತಾ ಬಂದವು. ಹೊಯ್ಸಳರ ಕಾಲದಲ್ಲಿ ಅವು ಚೆಂಡುಗಳಂತೆ ವೃತ್ತಾಕಾರ ಪಡೆದವು. ಅನಂತರ ಅಕ್ಷರಗಳ ಬಗಲು ಅಕ್ಕ ಪಕ್ಕದೆಡೆಗೆ ಸೆಳೆದಂತೆ ಕಂಡುಬಂದವು. ಆಧುನಿಕ ಕಾಲಕ್ಕೆ ಆ ಅಕ್ಷರಗಳು ಮುದ್ದಾದ ಆಕಾರವನ್ನು ಪಡೆದುವು.

೨. ಅಕ್ಷರಗಳ ಬೆಳವಣಿಗೆ ಕ್ರಮವಾಗಿ ಎಂದರೆ ನಿಧಾನವಾಗಿ ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಬದಲಾವಣೆಗಳನ್ನು ಹೊಂದಿತು. ಗಡಿಯಾರ ಚಲಿಸಿದಂತೆ ಸ್ವಲ್ಪ ಸ್ವಲ್ಪವೇ ಬದಲಾವಣೆಗೊಳ್ಳುತ್ತಾ ಶತಮಾನಗಳ ಹೆಜ್ಜೆಗಳನ್ನು ಅವುಗಳಲ್ಲಿ ಮೂಡಿಸಿತು. ಒಂದು ರೀತಿಯಲ್ಲಿ ಈ ಬೆಳವಣಿಗೆಯು ಕಾಲಮಾಪಕವಾಯಿತು.

೩. ಬ್ರಾಹ್ಮೀ ಲಿಪಿಯ ಈ ಕ್ರಮಬದ್ಧ ಬೆಳವಣಿಗೆಯು ಕಾಲ ನಿರ್ಧಾರಕ್ಕೆ ಬಹಳ ಸಹಾಯಕವಾಗಿದೆ. ಒಂದು ಶಾಸನದ ಲಿಪಿಯನ್ನು ನೋಡಿದಾಗ ಅಕ್ಷರಗಳ ಸ್ವರೂಪವನ್ನು ಗುರುತಿಸುತ್ತಾ ಆ ಶಾಸನವು ಯಾವ ಶತಮಾನದ್ದೆಂದು ಹೇಳಬಹುದು ಮತ್ತು ನಕಲು ಶಾಸನಗಳನ್ನು ಗುರುತಿಸಬಹುದು.



ಚಿತ್ರ-೮
ಸ್ವರಗಳು.
ಕ್ರಿ.ಪೂ. ೩ನೆಯ ಶತಮಾನ ಮೌರ್ಯ
ಕ್ರಿ.ಶ. ೨ನೆಯ ಶತಮಾನ ಶಾತವಾಹನ
ಕ್ರಿ.ಶ. ೪-೫ನೆಯ ಶತಮಾನ ಕದಂಬ
ಕ್ರಿ.ಶ. ೬ನೆಯ ಶತಮಾನ ಗಂಗ
ಕ್ರಿ.ಶ. ೬ನೆಯ ಶತಮಾನ ಬಾದಾಮಿಯ ಚಾಲುಕ್ಯ
ಕ್ರಿ.ಶ. ೯ನೆಯ ಶತಮಾನ ರಾಷ್ಟ್ರಕೂಟ
ಶತಮಾನ ವಿಜಯನಗರ
ಅ
ಅರ್ಧ ಸಾಲು
ಆ
ಇ
ಈ
ಉ
ಋ
ಎ

ಔ

ವ್ಯಂಜನಗಳು

ಕ

ಖ


ಗ


ಘ


ಙ


ಚ


ಛ




ಅಕ್ಷರಗಳು
ಕ್ರಿ.ಪೂ. ೩ನೆಯ ಶತಮಾನ ಮೌರ್ಯ
ಕ್ರಿ.ಶ. ೨ನೆಯ ಶತಮಾನ ಶಾತವಾಹನ
ಕ್ರಿ.ಶ. ೪-೫ನೆಯ ಶತಮಾನ ಕದಂಬ
ಕ್ರಿ.ಶ. ೬ನೆಯ ಶತಮಾನ ಗಂಗ
ಕ್ರಿ.ಶ. ೬ನೆಯ ಶತಮಾನ ಬಾದಾಮಿಯ ಚಾಲುಕ್ಯ
ಕ್ರಿ.ಶ. ೯ನೆಯ ಶತಮಾನ ರಾಷ್ಟ್ರಕೂಟ
ಕ್ರಿ.ಶ. ೧೪ನೆಯ ಶತಮಾನ ವಿಜಯನಗರ
ಜ
ಝ
ಞ
ಟ
ಠ
ಡ
ಢ




ಸ್ವರಗಳು.
ಕ್ರಿ.ಪೂ. ೩ನೆಯ ಶತಮಾನ ಮೌರ್ಯ
ಕ್ರಿ.ಶ. ೨ನೆಯ ಶತಮಾನ ಶಾತವಾಹನ
ಕ್ರಿ.ಶ. ೪-೫ನೆಯ ಶತಮಾನ ಕದಂಬ
ಕ್ರಿ.ಶ. ೬ನೆಯ ಶತಮಾನ ಗಂಗ
ಕ್ರಿ.ಶ. ೭ನೆಯ ಶತಮಾನ ಬಾದಾಮಿಯ ಚಾಲುಕ್ಯ
ಕ್ರಿ.ಶ. ೯ನೆಯ ಶತಮಾನ ರಾಷ್ಟ್ರಕೂಟ
ಕ್ರಿ.ಶ. ೧೪ನೆಯ ಶತಮಾನ ವಿಜಯನಗರ
ಭ
ಮ
ಯ
ರ
ಲ
ವ
ಶ


ಷ
ಸ
ಹ
ಳ
ಱ
ೞ
ಕಾಗುಣಿತ
ಆ
ಇ


ಸ್ವರಗಳು	ಕ್ರಿ.ಪೂ. ೩ನೆಯ ಶತಮಾನ ಮೌರ್ಯ	ಕ್ರಿ.ಶ. ೨ನೆಯ ಶತಮಾನ ಶಾತವಾಹನ	ಕ್ರಿ.ಶ. ೪-೫ನೆಯ ಶತಮಾನ ಕದಂಬ	ಕ್ರಿ.ಶ. ೬ನೆಯ ಶತಮಾನ ಗಂಗ	ಕ್ರಿ.ಶ. ೬ನೆಯ ಶತಮಾನ ಬಾದಾಮಿಯ ಚಾಲುಕ್ಯ	ಕ್ರಿ.ಶ. ೯ನೆಯ ಶತಮಾನ ರಾಷ್ಟ್ರಕೂಟ	ಕ್ರಿ.ಶ ೧೪ನೆಯ ಶತಮಾನ ವಿಜಯನಗರ

ಈ —

ಉ —

ಎ —

ಏ —



ಪ್ರಾಚೀನ ಬರಹಗಳನ್ನು ಓದುವ ಕ್ರಮ

ಪ್ರಾಚೀನ ಲಿಪಿಗಳಲ್ಲಿ ಪದಗಳ ವಿಂಗಡಣೆ ಅಥವಾ ವಾಕ್ಯಗಳನ್ನು ವಿಭಾಗಿಸುವ ಕ್ರಮ ಇರಲಿಲ್ಲ. ಆದುದರಿಂದ ಪ್ರಾಚೀನ ಬರಹಗಳನ್ನು ಓದುವಾಗ ಅಕ್ಷರಗಳನ್ನು ಕೂಡಿಸಿ ಅಂದಾಜಿನ ಮೇಲೆ ಪದಗಳನ್ನೂ, ವಾಕ್ಯಗಳನ್ನೂ ಗುರುತಿಸಬೇಕು. ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳದೆ ಓದಲು ಹೋಗಬಾರದು. ಆದುದರಿಂದ ಚೆನ್ನಾಗಿ ಭಾಷೆಯನ್ನು ಅರಿತುಕೊಂಡು ಸಾವಕಾಶವಾಗಿ ಶಾಸನಗಳನ್ನು ಅಥವಾ ಪ್ರಾಚೀನ ಬರಹಗಳನ್ನು ಓದತೊಡಗಬೇಕು. ಹಿಂದಿನ ಕಾಲದಲ್ಲಿ ಬರೆಯುವವನು ಒಬ್ಬನಾದರೆ ಅದನ್ನು ಶಿಲೆಯ ಮೇಲೆ ಮೂಡಿಸುವವನು ಬರೆಯಲು ತಿಳಿಯದ ಶಿಲ್ಪಿಯಾಗಿದ್ದ. ಒಮ್ಮೊಮ್ಮೆ ಕಣ್ಣು ತಪ್ಪಿ ತಪ್ಪುಗಳೂ ಆಗುತ್ತಿದ್ದವು. ಹಳೆಯ ಬರಹಗಳು ಕಲ್ಲಿನ ಮೇಲೋ ಅಥವಾ ಲೋಹಗಳ ಮೇಲೋ ಇದ್ದು ಮಳೆ, ಬಿಸಿಲು, ಗಾಳಿ ತಾಕಿ ಅಸ್ಪಷ್ಟವಾಗಿ ತೋರುವುದೂ ಉಂಟು. ಇಂತಹವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬರಹವನ್ನು ಓದುವಾಗ ಬಹಳ ಜಾಗರೂಕತೆಯಿಂದ ಅಕ್ಷರಗಳನ್ನು ಅವುಗಳ ಕೆತ್ತಿಹೋದ ಸ್ವರೂಪವನ್ನು ಕಲ್ಪನೆ ಮಾಡಿಕೊಳ್ಳಬೇಕಾಗುತ್ತದೆ. ಪುಸ್ತಕದ ಕೊನೆಯಲ್ಲಿರುವ ಕೆಲವು ಶಾಸನಗಳ ಚಿತ್ರಗಳನ್ನು ನೋಡಿದಾಗ ಈಗ ಹೇಳಿದುದು ನಿಮಗೆ ಇನ್ನೂ ಮನದಟ್ಟಾಗುವುದು.

ಚಿತ್ರ—೯ನ್ನು ನೋಡಿರಿ. ಪ್ರತಿಪಂಕ್ತಿಯನ್ನು ಓದುವಾಗ, ಆ ಬರಹವು ಯಾವ ಕಾಲದ್ದು ಎಂದು ಖಾತ್ರಿ ಮಾಡಿಕೊಳ್ಳಿರಿ. ಅನಂತರ ಬ್ರಾಹ್ಮೀಲಿಪಿಯ ಬದಲಾವಣೆಯನ್ನು

ನೆನಪಿಸಿಕೊಂಡು ಒಂದೊಂದೇ ಅಕ್ಷರವನ್ನು ಓದಿರಿ. ಕಷ್ಟವೆನಿಸಿದರೆ ಪಂಕ್ತಿಯ ಕೆಳಗೆ ಕೊಟ್ಟಿರುವ ಕನ್ನಡ ಲಿಪಿಯನ್ನು ನೋಡಿ ಸಹಾಯ ಪಡೆದುಕೊಳ್ಳಿರಿ.


ಮೇಲೆ ಹೇಳಿದ ರೀತಿಯಲ್ಲಿ ಚಿತ್ರ ೧೦ ರಿಂದ ಹಿಡಿದು ಚಿತ್ರ ೨೦ ರ ವರೆಗೂ ಓದಿರಿ. ಇನ್ನು ನೀವು ಪುಸ್ತಕದ ಸಹಾಯವಿಲ್ಲದೆಯೇ ಪ್ರಾಚೀನ ಕನ್ನಡ ಬರಹಗಳನ್ನು ಓದಬಲ್ಲಿರಿ. ಪುಸ್ತಕದ ಕೊನೆಯಲ್ಲಿರುವ ಅಭ್ಯಾಸಗಳನ್ನು ನೀವು ಮಾಡಿ ಮುಗಿಸಿದರೆ ನಿಮಗೆ ಸಾಕಷ್ಟು ಪ್ರಾಚೀನ ಲಿಪಿಯ ಜ್ಞಾನ ಆದೀತು.

ಚಿತ್ರ-೯ ಪುಲಮಾವಿಯ ನಾಸಿಕದ ಶಾಸನ ಕ್ರಿ.ಶ. ೨ ನೆಯ ಶತಮಾನ

ಶಾಸನದ ನಾಲ್ಕನೆಯ ಪಂಕ್ತಿ]



ಪಿ ಯ ದ ಸ ನ ಸ ವರವಾರಣವಿಕಮಚಾರುವಿಕಮ ಸ(ಭು)ಜಗ




ಪ ತಿ ಭೋಗ ಪೀನ ವಾಟವಿಪುಲ (ದೀ)ಘಸು - - -

[ಮೂಲ ಶಾಸನದಲ್ಲಿ ೧೧ ಪಂಕ್ತಿಗಳಿವೆ]

ಚಿತ್ರ-೧೦ ಹಲ್ಮಿಡಿ ಶಾಸನ [ಕ್ರಿ.ಶ. ೫ನೆಯ ಶತಮಾನ]

[ಮೂರನೆಯ ಪಂಕ್ತಿಯ ಮಧ್ಯದಿಂದ ಆರಂಭಗೊಂಡು
ನಾಲ್ಕನೆಯ ಪಂಕ್ತಿಯನ್ನು ಒಳಗೊಂಡಿರುವ ಪಾಠ]



ಶ್ರೀ ಪ್ಮೃ ಗೇ ಶ ನಾ ಗಾ ಹ್ವ ಯ ಠಿ ರ್ವ್ವರಾ




ಭ ಟ ಠಿ (ಕುಲಾಮಲ) ವ್ಯೋಮ ತಾ ರಾ ಧಿ


ಚಿತ್ರ-೧೦ ಕದಂಬ ಮೃಗೇಶವರ್ಮನ ಶಾಸನ

[ಕ್ರಿ.ಶ. ೫ನೆಯ ಶತಮಾನ]

[ಎರಡನೆಯ ತಾಮ್ರ ಪತ್ರದ ಮೊದಲನೆಯ ಪಂಕ್ತಿ]



ವಿ ಜ ಯ ವೈ ಜ ಯಿ ಕಃ ಸಂ ವ್ವ ತ್ಸ ರಃ ದ್ವಿ ತೀ ಯಃ




ಹೇ ಮ ನ್ತ ಪ ಕ್ಷಃ [ಈ ಪತ್ರದಲ್ಲಿ ಒಟ್ಟು ೪ ಪಂಕ್ತಿಗಳಿವೆ]

ಚಿತ್ರ-೧೧ ಬಾದಾಮಿ-ಚಾಳುಕ್ಯ ವಿನಯಾದಿತ್ಯನ ಶಾಸನ [ಹರಿಹರ]

[ಕ್ರಿ.ಶ. ೭ನೆಯ ಶತಮಾನ]

[೫ನೆಯ ಪಂಕ್ತಿ ಮಾತ್ರ]




ಜಿ ನಃ ಪಾ ತ್ರಾ ಯ ಮಾ ರ ಶ ರ್ಮ್ಮ ಣಃ ಪು ತ್ರಾ ಯ



ಋ ಶಾ ನ ಶ ರ್ಮ್ಮ ಣೇ ವೇ ದ ವೇ ದಾಂ ಗ


[ಈ ಪತ್ರದಲ್ಲಿ ಒಟ್ಟು ೧೦ ಪಂಕ್ತಿಗಳಿವೆ]

ಚಿತ್ರ-೧೨ ಶ್ರೀಹರ್ಷ ಮಹಾರಾಜನ ಹಸ್ತಾಕ್ಷರ [ಕ್ರಿ.ಶ. ೭ನೆಯ ಶತಮಾನ]




ಸ್ವ ಹ ಸ್ತೋ ಮ ಮ ಮ ಹಾ ರಾ ಜಾ ಧಿ ರಾ ಜ ಶ್ರೀ ಹ ರ್ಷ ಸ್ಯ


ಚಿತ್ರ-೧೯ ಮಂಗಲೇಶನ ಬಾದಾಮಿ ಶಾಸನ [ಕ್ರಿ.ಶ. ೬ನೆಯ ಶತಮಾನ]




ಸ್ವಸ್ತಿ ಶ್ರೀಮತ್ ಪೃಥಿವೀ ವ ಲ್ಲಭ ಮ(ಂ)ಗಲಿಸನಾ



ಕ ಲ್ಮನೆಗೆ ಇತ್ತೋದು ಲಂಜಿಗೋಃ ಸರಂ ದೇವ ಕೇ ಪೂನೀಃಯಿವ



ಮಾಲಾ ಕಾ ರ ನ್ಗೆ ಅ ರ್ದ್ಧ ವೀಃ ಸ ದಿ ಇತ್ತೋಃ ದಾನಯಿವೋಃನಾ




ಪ ಞ್ಚ ಮಹಾ ಪಾ ತ ಕ ಮ ಕುಂ ಪಟಿನೆಯ ನರ ಕ ದಾ ಪ್ಪುಯಿ ಅಕುಮ್


ಚಿತ್ರ-[illegible] ಗಂಗರ ಶಾಸನ [ಕ್ರಿ.ಶ. ೮ನೆಯ ಶತಮಾನ]

[ಮಾರಸಿಂಹನ ಆಲೂರು ತಾಮ್ರ ಶಾಸನ]

[ಶಾಸನದ ಮೂರನೆಯ ಪಂಕ್ತಿ]



ಳ್ ಕೂಡಿತ್ತು ಅ ಸ್ಯ ದಾ ನ ಸ್ಯ ಸಾ ಕ್ಷಿ ಣಃ ಷ ಣ್ಣ ವ ತಿ



ಸ ಹ ಸ್ರ ವಿ ಷ ಯ ಪ್ರ ಕೃ ತ ಯಃ ಯೋಃಸ್ಯಾಪ ಹ ರ್ತ್ತಾಲೋಃ

[ಈ ಪತ್ರದಲ್ಲಿ ಒಟ್ಟು ೧೮ ಪಂಕ್ತಿಗಳಿವೆ]

[ಮೊದಲನೆಯ ಮೂರು ಪಂಕ್ತಿಗಳು]



ಸ್ವಸ್ತ್ಯಮೋಘವರ್ಷ ಶ್ರೀಪೃಥಿವೀವಲ್ಲಭ ಮಹಾ




ರಾಜಾಧಿರಾಜ ರಾಜ ಪರಮೇಶ್ವರ ಭಟಾರರ




[illegible]ಜ್ಯ ಪ್ರವ್ರಧಿಯೊಳ್ ಶಕನೃಪಕಾಲಂ ಶೇಕ [illegible]

[ಈ ಶಾಸನದಲ್ಲಿ ಒಟ್ಟು ೨೩ ಪಂಕ್ತಿಗಳಿವೆ]

[ಮೊದಲನೆಯ ಪಂಕ್ತಿ]



ಮಹ ಪತ್ತರ ಮೊದಲ ಬಾದಂ ಶ್ರೀ ಮು ಮ ತ್ತ ಮು ದ [illegible]




ಶಾರಂ ಮುತ್ತಗೆಯ ಶ್ರೀರಾಮೇಶ್ವರ


[ಈ ಶಾಸನದಲ್ಲಿ ಒಟ್ಟು ೨೦ ಪಂಕ್ತಿಗಳು]

ಚಿತ್ರ-೧೭ ಸೋವಣ್ಣ ಮಹಾದೇವನ ಕಲ್ಲೇರಿ ಶಾಸನ [ಕ್ರಿ.ಶ. ೧೩ನೆಯ ಶತಮಾನ]

[೧೩ ರಿಂದ ೧೬ನೆಯ ಪಂಕ್ತಿಯವರೆಗೆ]

೧೩ 


ಕ ಸ ರ್ವ್ವ ಮಾ ನ್ಯ ಯಿಂ ನ್ತೀ ಧ ರ್ಮ ಮಂ ಸ್ತ್ರ ಬಿದ ಗೆ

೧೪ 

(ವು)ಡ ಸ ಮ ಸ್ತ ಪ್ರ ಜೆ ಸ್ತ್ಥಾ ನ ಮಾ ನ್ಯ ಮುಂಮು

೧೫ 

(ರಿದಂ)ಡಂ ಗ ಳಿಂ ಪ್ರ ತಿ ಪಾ ಳಿ ಸು ವ

೧೬ 


(ರು)ಮಂ ಗ ಳ ಮ ಹಾ ಶ್ರೀ ಶ್ರೀ

[ಈ ಶಾಸನದಲ್ಲಿ ಒಟ್ಟು ೧೬ ಪಂಕ್ತಿಗಳಿವೆ]


ಚಿತ್ರ-೧೮ ಬೇಲೂರು ಶಾಸನ [ಹೊಯ್ಸಳ ಇಮ್ಮಡಿ ಬಲ್ಲಾಳ]

[ಕ್ರಿ.ಶ. ೧೩ನೆಯ ಶತಮಾನ]

[ಪಂಕ್ತಿ ೧೯ರ ಮಧ್ಯದಿಂದ ೨೧ರ ವರೆಗೆ]



ಎ ಸೆ ಯು ಲ್ ಜಾ ಳ ಕ ಜಾ ಳ ಕಂ ಧ್ಯ ಡ ಕ ವಾ ಟಂ




ದ್ವಾರ ಶಾ ಖಾ ಳಿ ಬಾ ಣ ಸು ಕೊ ಟ್ಟಾರ ಉದ ಗ್ರ ವ



ಪ್ರ ಮು ದ ವಾ ಸಂ - - - -

[ಈ ಶಾಸನದಲ್ಲಿ ಒಟ್ಟು ೨೨ ಪಂಕ್ತಿಗಳಿವೆ]

ಚಿತ್ರ-೨೦ ಸದಾಶಿವರಾಯನ ಶಾಸನ [ಲಕ್ಷ್ಮೇಶ್ವರ] [ಕ್ರಿ.ಶ ೧೬ನೆಯ ಶತಮಾನ]




ಲಿಪಿಯ ಬೆಳವಣಿಗೆಗೆ ಕಾರಣಗಳು

ಲಿಪಿಯು ಬರೆದಿರುವ ಅಕ್ಷರಗಳ, ವಾಕ್ಯಗಳ ಸಮೂಹ ವೆಂದು ಆಗಲೇ ತಿಳಿಯ ಪಡಿಸಿದ್ದೆ. ಬರೆಯುವ ಸಾಮಗ್ರಿಗಳು ಎಂದರೆ ಬರೆಯುವ ಫಲಕ ಮತ್ತು ಲೇಖನಿ ಇವುಗಳು ಅಕ್ಷರ ಗಳ ರೂಪಾಂತರಕ್ಕೆ ಮುಖ್ಯ ಕಾರಣವಾಗಿವೆ. ತಾಳೇ ಪತ್ರಗ ಳಂತಹ ತೆಳ್ಳಗಿನ ಹಾಳೆಯ ಮೇಲೆ ಲೇಖನಿಯ ಮೊನೆಚಾದ ತುದಿಯಿಂದ ಕೆತ್ತಿಹೋದ ಭಾಗಗಳಲ್ಲಿ ಶಾಯಿ ತುಂಬಿಕೊಂಡು ಅಕ್ಷರಗಳಿಗೆ ಹೊಸ ಸ್ವರೂಪ ಕೊಟ್ಟವು. ಕಲ್ಲು ಕುಟಿಗರು ಮತ್ತು ತಾಮ್ರಪತ್ರದ ಬರಹಗಾರರು ಇವುಗಳನ್ನೇ ಇದ್ದುದು ಇದ್ದ ಹಾಗೆ ಬರೆಯುತ್ತಾ ಬಂದರು. ಲಾಳದ ಕಡ್ಡಿಯ ಲೇಖನಿ ಗಳು ಅಡ್ಡ ರೇಖೆಯು ತೆಳ್ಳಗೂ ಉದ್ದ ರೇಖೆಗಳು ದಪ್ಪಗೂ ತೋರುವಂತೆ ಮಾಡಿದವು. ಹಿಂದಿನ ಕಾಲದಲ್ಲಿ ಸಂಚಾರ ಕಷ್ಟ ಕೆಲಸವಾಗಿತ್ತು. ಅಲ್ಲಲ್ಲಿಯ ಪ್ರದೇಶಗಳ ಜನರು ತಮ್ಮ ಅಭಿ ರುಚಿಗೆ ತಕ್ಕಹಾಗೆ ಸ್ವಲ್ಪ ಸ್ವಲ್ಪ ಬದಲಾವಣೆ ಮಾಡಿ ಅಕ್ಷರ ಗಳನ್ನು ಬರೆಯತೊಡಗಿದರು. ಬರೆಯುವವರು ಅಲಂಕಾರ ಕ್ಕಾಗಿಯೋ ಅಥವಾ 'ತಮ್ಮ ಶೈಲಿ' ಎಂದು ತೋರಿಸುವ ಹೆಮ್ಮೆಗೋ ಬರಹಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿದರು. ಹೊಯ್ಸಳರ ಕಾಲದಲ್ಲಿ ಅಕ್ಷರಗಳು ಚೆಂಡುಗಳಂತೆ ಗುಂಡಗೆ ಬರೆಯಲ್ಪಡುತ್ತಿದ್ದವು. ಮುದ್ರಣದಂತಹ ಮಾದರಿಯ ಸೌಲಭ್ಯವಿಲ್ಲದೆ, ಅನೇಕ ರೂಪಾಂತರಗಳು ತಮ್ಮ ತಮ್ಮದೇ ಶಾಖೆಗಳನ್ನು ಪಡೆದವು. ಈ ರೀತಿಯಲ್ಲಿ ಲಿಪಿಯು ಮುನ್ನಡೆ ಯಿತು.

ಪರಿಶಿಷ್ಟ


ಚಿತ್ರ-೨೧ ಪ್ರಾಚೀನ ಸಂಖ್ಯೆಗಳು [ಕ್ರಿ.ಪೂ ೩ನೆಯ ಶತಮಾನ]




ಚಿತ್ರ - ೨೨

ಸಂಖ್ಯೆಗಳು

ಸಂಖ್ಯೆ	ಕ್ರಿ.ಶ. ೨ನೆಯ ಶತಮಾನ	೯ನೆಯ ಶತಮಾನ	೧೨ನೆಯ ಶತಮಾನ	೧೬ನೆಯ ಶತಮಾನ



[illegible]




[ಉತ್ತರ ಪುಸ್ತಕದ ಕೊನೆಯಲ್ಲಿದೆ]

ಚಿತ್ರ-೨೪ ಅಭ್ಯಾಸ-೨


ಚಾಲುಕ್ಯ ವಲ್ಲಭೇಶ್ವರನ ಬಾದಾಮಿಶಾಸನ [ಪುಲಿಕೇಶಿ-೧]
[ಕ್ರಿ.ಶ. ೬ನೆಯ ಶತಮಾನ]

ಕನ್ನಡ ಲಿಪಿಯಲ್ಲಿ ಬರೆಯಿರಿ



[ಉತ್ತರ ಪುಸ್ತಕದ ಕೊನೆಯಲ್ಲಿದೆ]

ಅಭ್ಯಾಸ-೩ ಕನ್ನಡ ಲಿಪಿಯಲ್ಲಿ ಬಿಡಿಸಿ, ಸಾರಾಂಶವನ್ನು ಬರೆಯಿರಿ




[ಉತ್ತರ ಪುಸ್ತಕದ ಕೊನೆಯಲ್ಲಿದೆ]

ಚಿತ್ರ-೨೯ ಗಂಗ ನೀತಿ ಮಾರ್ಗನ ಶಾಸನ [ದೊಡ್ಡಹುಂಡಿ ...] [ಕ್ರಿ.ಶ. ೯ನೆಯ ಶತಮಾನ]

ಅಭ್ಯಾಸ-೪

ಕನ್ನಡ ಲಿಪಿಯಲ್ಲಿ ಬಿಡಿಸಿ, ಸಾರಾಂಶವನ್ನು ಬರೆಯಿರಿ



[ಉತ್ತರ ಪುಸ್ತಕದ ಕೊನೆಯಲ್ಲಿದೆ]

ಅಭ್ಯಾಸ ೫




(ಉತ್ತರ ಪುಸ್ತಕದ ಕೊನೆಯಲ್ಲಿದೆ)

ಅಭ್ಯಾಸ ೬



(ಉತ್ತರ ಪುಸ್ತಕದ ಕೊನೆಯಲ್ಲಿದೆ)

ಅಭ್ಯಾಸ ೭



(ಉತ್ತರ ಪುಸ್ತಕದ ಕೊನೆಯಲ್ಲಿದೆ)

ಉತ್ತರಗಳು

ಅಭ್ಯಾಸ ೧

೧ ಕದಂಬಾಣಾಂ ಮಯೂರ ಶರ್ಮ್ಮಣ ವಿನಿರ್ಮ್ಮಿತಂ
೨ ತಟಾಕಂ ದುಮ ತ್ರಿಕೂಟ ಅಭೀರ ಪಲ್ಲವ ಪಾರಿ
೩ ಯಾತ್ರಿಕ ಸಕ ಸ್ಥಾಣ ಸಯಿಂಧಕ ಪುಣಾಟ ಮೋಕರಿಣ

ಅಭ್ಯಾಸ ೨

೧ ಸ್ವಸ್ತಿ ಶಕವರ್ಷೇಷು ಚತುಶ್ಶತೇಷು
ಪಞ್ಚ ಷಷ್ಟಿಯುತೇಷು
೨ ಅಶ್ವಮೇಧಾದಿ ಯಜ್ಞಾನಾಂ ಯಜ್ವಾ
ಶ್ರೌತ ವಿಧಾನತಃ
೩ ಹಿರಣ್ಯ ಗರ್ಭ ಸಮ್ಭೂತಶ್ಚಲಿಕ್ಯೋ ವಲ್ಲಭೇಶ್ವರ ಃ
೪ ಧರಾಧರೇಂದ್ರ ವಾತಾಪಿ ಮಜೇಯ ಮಭ್ಯುದಯೋ ಭುವಃ
೫ ಅಧಸ್ತಾದು ಪರಿಷ್ಕಾರ್ತ್ತ ದುರ್ಗ್ಗಮೇತದ ಚೀಕರತ್

ಅಭ್ಯಾಸ ೩

೧ ಸ್ವಸ್ತಿ ವಿಜಯವಾತಾಪ್ಯಧಿಷ್ಠಾನದಾ ಶ್ರೀ ಮಹಾಬಾ
೨ ತುರ್ವಿದ್ಯ ಸಮುದಯ ಪಿರಿಯರ್ಭಸಿರ್ವರುಂ ಈ ಊರ
೩ ಸಮ್ಮಗಾರರಾ ಕವಳ್ತಿಯಾಸ್ವಿಟ್ಟಾರ್ ದೋಷಂಗೆ
೪ ಯೊನ್ಗೆ ದಣ್ಡಂ ನಾಡೊಳ್ಳವಳ್ತಿ ಆದೊಡಂ ಇಲ್ಲಿ ಇಲ್ಲೆ
೫ ಉಣ್ಣ ಕೊಳಿಂ ವೇನ್ವ್ವಪ್ಪಞ್ಚ ಮಹಾಪಾತಕನಕ್ಕುಂ
೬ ನಿಡಿಯು ಮಾರ (c) ಪಡೆದೋನ್

ಸಾರಾಂಶ :—ವಾತಾಪಿಯ ಮಹಾಚತುರ್ವಿದ್ಯಾ ಸಮುದಾಯದ ೩೦೦೦ ಸದಸ್ಯರ ಸಮುದಾಯವು ನಿಡಿಯ ಮಾರ ಎನ್ನುವನಿಗೆ ದತ್ತಿಬಿಟ್ಟರು. ಇದನ್ನು ಅಡ್ಡಿ ಪಡಿಸುವವನಿಗೆ ಪಂಚಮಹಾ ಪಾತಕಗಳು ಒದಗುವವು. ದಂಡಕ್ಕೆ ಗುರಿಯಾಗುವನು.

ಅಭ್ಯಾಸ ೪

೧ ಸ್ವಸ್ತಿ ನೀತಿಮಾರ್ಗ ಕೊಂಗುಣಿವರ್ಮ್ಮ ಧರ್ಮ್ಮ ಮಹಾರಾ
೨ ಜಾಧಿರಾಜ ಕೋವಳಾಲ ಪುರಾಪರ (ಮೇ) ಶ್ವರ ನನ್ದ
೩ ಗಿರಿನಾಥ ಶ್ರೀಮತ್ ಪೆರ್ಮ್ಮನಡಿಗಳ್ ಸ್ವರ್ಗಮೇಱಿದ
೪ ಏಱಿದೊಡೆ ಪೆರ್ಮ್ಮಾನಡಿಗಳ ಮನೆ ಮಗತ್ತಿನ್ ಅಗ
೫ ರಯ್ಯಂ ನೀತಿಮಾರ್ಗ ಪೆರ್ಮ್ಮನಡಿಗೆ ಕಿಱ್ಗಿಣ್ತ್ತಿಯಾದಂ ಪೆರ್ಮ್ಮಾ
೬ ನಡಿಗಳ್ ಶುಪುತ್ರ ಸತ್ಯವಾತ್ಯ ಪೆರ್ಮಾನಡಿಗಳ್ದ ಸೋ

ಸಾರಾಂಶ :—ಕೊಂಗುಣಿ ವರ್ಮ್ಮನು ಮಡಿದಾಗ, ಅವನ ನಿಷ್ಠಾವಂತ ಸೇವಕನಾದ ಅಗರಯ್ಯ ಎನ್ನುವನು ತನ್ನ ಆತ್ಮಾರ್ಪಣೆ ಮಾಡಿಕೊಂಡು ತನ್ನ ಒಡೆಯನೊಂದಿಗೆ ಸ್ವರ್ಗ ಸೇರಿದನು.

ಅಭ್ಯಾಸ ೫

ಸ್ವಸ್ತಿ ಶ್ರೀ ಚಿತ್ರವಾಹನ ನಾಮ
ಧೇಯು ಆಳು ಪನ್ದ್ರಸಾ ರಾಜ್ಯದುಳ್ಳಾ
ಕಿಳ್ಳಮಿಳ ಅರಸನಾ ಬೊಯ್ಗ್ಗನುಳ್ಳಾ
ಶ್ರೀ ಮಾರಕೊಡಲೊನಾಳ ಜಕ್ಕನಾಯ್ಗ್ಗರಾದ
ಮಣಿಕಿರಿಯೊನ್ನಾಗದತ್ತನ್ಗ್ಗೆ ಮಙ್ಗಲ
ಪುರದುಳ್ ನಗರ ಸಹಿತವಾಗಿ ಪಾಣ್ಡ್ಯ
ನಾಯ್ಗ್ಗನೆನ್ದು ಪಟ್ಟಕಟ್ಟಿ...... (ಕ್ರಿ ಶ. ೯ನೇ ಶತಕ)

ಅಭ್ಯಾಸ ೬

ಸ್ವಸ್ತಿ ಶ್ರೀ ಸಿಙ್ಗ ಪುಲಿ
ಸಙ್ಗ್ರಾಮ ಕೇಸರಿ ಅಙ್ಗಜನಮು
ಸಕ್ಕ ತಿಙ್ಗಳ ಕೂದಪತಾಕೆ
ಸ್ವೇತ ವಾಹನನ್ ಉದಯಪುರ
ಮಾನ್ ಎಱಿದು ಪೋಗುವಲ್ಲಿ
ಆಳಂವರಸರಾ ಮನೆಮಗತಿ
ನ್ ಸಿಙ್ಗಪುಲಿ ಎಱಿದು ಸ್ವರ್ಗ್ಗ
ಲಯಕ್ಕೇರಿದಾನ್ ಆತನ ತಙ್ಗಲ
ಸನ್ದೆ ಪ್ರೋಡಿಸಿಱಿ (ಸಿ?) ದಾ ಕಲ್ಲು (ಕ್ರಿ.ಶ. ೯ನೇ ಶತಕ)

ಅಭ್ಯಾಸ ೭

... ...ಶ್ರೀ

ತವಾಹನನ್ ಉದಯುಪು
ರ ಮಾನೆಱಿದು ಪೊಗುವಲ್ಲಿ
ಎಱಿದು ಸ್ವರ್ಗಾಲಯು
ಕ್ಕೇರಿದಾನ್ ಅವನ ತ
(ಙಗೆ) ಜೋಗಿನಿಱಿಸಿದ
ಕಲ್ಲು (ಕ್ರಿ. ಶ. [illegible])

ಸಹಾಯಕ ಗ್ರಂಥಗಳು

೧ ಕನ್ನಡ ಲಿಪಿಯ ಉಗಮ ಮತ್ತು ವಿಕಾಸ
—ಶ್ರೀ ಎಂ. ವಿ. ನರಸಿಂಹಮೂರ್ತಿ

2 Indian Palaeography —R. B. Pandey

3 Indian Epigraphy —D. C. Sircar

4 Indian Palaeography —Buhler


ಪ್ರಥಮ ವಿಶ್ವ ಕನ್ನಡ ಸಮ್ಮೇಳನ
1982